# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 191 | Pages. 2 | Date: 07-06-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 191 - ಪುಟಗಳು : 2 - 07 ಜೂನ್ 2025 ಶನಿವಾರ Ph: 8762954248 ದರ : ₹1


# ಗ್ರಾನೈಟ್ ಕ್ವಾರಿಯಲ್ಲಿ ಸ್ಫೋಟ

## ಪ್ರಕರಣವನ್ನೇ ಮುಚ್ಚಿ ಹಾಕಿದ್ದ ಕ್ವಾರಿ ಮಾಲೀಕನ ಬಂಧನ : ಬೆಳಗ್ಗೆ ಆದ ಸ್ಫೋಟ ಮಧ್ಯರಾತ್ರಿ ಬಯಲು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲ್ಲೂಕಿನ ದುಮಗೆರೆ ಗ್ರಾಮದ ಕಲ್ಲು ಕ್ವಾರಿಯೊಂದರಲ್ಲಿ ಗುರುವಾರ ಬೆಳಗ್ಗೆ ಕೆಲಸ ಮಾಡುವಾಗ ಸ್ಫೋಟ ಸಂಭವಿಸಿ, ಓರ್ವ ಕಾರ್ಮಿಕ ಸಾವನ್ನಪ್ಪಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆಯನ್ನು ಮಾಧ್ಯಮಗಳು ಬೆಳಕಿಗೆ ತಂದಿವೆ.

ತಮಿಳುನಾಡು ಮೂಲದ ಮಣಿ (40) ಮೃತ ವ್ಯಕ್ತಿಯಾಗಿದ್ದು, ಏಳುಮಲೈ, ಸೆಲ್ವನ್, ಮಧುಲೈ, ಮತ್ತು ಸಿದ್ದರಾಜು ಗಂಭೀರವಾಗಿ ಗಾಯಗೊಂಡು ಹಾಸನ ನಗರದ ಖಾಸಗಿ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ದೇವರಾಜು ಎಂಬುವವರ ಒಡೆತನದ ನವ್ಯಶ್ರಿ ಮಿನರಲ್ಸ್ ಗೆ ಸರ್ವೆ ನಂಬರ್ 5 ರಲ್ಲಿ ಎರಡು ಎಕರೆ ಸರ್ಕಾರಿ ಜಾಗವನ್ನು ಲೀಸ್‌ಗೆ ಪಡೆಯಲಾಗಿದ್ದು, ಹಸಿರು ಗ್ರಾನೈಟ್ ಕಲ್ಲುಗಳನ್ನು ತೆಗೆಯಲಾಗುತ್ತಿದೆ. ಇವುಗಳನ್ನು ಹೊರ ರಾಜ್ಯ ಮತ್ತು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ.



ಮೃತ ಮಣಿ



### ನಡುರಾತ್ರಿಯೇ ಬಂದ ಅಧಿಕಾರಿಗಳು

ಗುರುವಾರ ಬೆಳಿಗ್ಗೆ ಕ್ವಾರಿಯಲ್ಲಿ ಕೆಲಸದ ವೇಳೆ ಸ್ಫೋಟ ಸಂಭವಿಸಿದ್ದು, ಮಣಿ ಸ್ಥಳದಲ್ಲಿಯೇ ಮೃತಪಟ್ಟರೆ, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ಘಟನೆಯ ಬಗ್ಗೆ ಪೊಲೀಸ್ ಠಾಣೆಗೆ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಯಾವುದೇ ಮಾಹಿತಿ ನೀಡದೆ, ಮೃತದೇಹವನ್ನು ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಣಿಯ ಪತ್ನಿಯ ಮನೆಗೆ ಸಾಗಿಸಲಾಗಿತ್ತು. ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಲಾಗಿತ್ತು. ಆದರೆ, ಮೂವರು ಸಾವನ್ನಪ್ಪಿದ್ದಾರೆ ಎಂಬ ವದಂತಿಯ ಬೆನ್ನುಹತ್ತಿ ರಾತ್ರಿ ಮಾಧ್ಯಮಗಳು ವರದಿ ಪ್ರಸಾರ ಮಾಡಿದ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಹಮದ್ ಸುಜೀತಾ ಅವರು ಆಸ್ಪತ್ರೆ ಹಾಗೂ ಕ್ವಾರಿ ಸ್ಥಳಕ್ಕೆ ತುರ್ತು ಭೇಟಿ ನೀಡಿದರು. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ಪೊಲೀಸರಿಂದ ಮಾಹಿತಿ ಸಂಗ್ರಹಿಸಿ, ಕೂಡಲೇ ಪ್ರಕರಣ ದಾಖಲಿಸುವಂತೆ ಸೂಚಿಸಿದರು. ಕ್ವಾರಿ ಮಾಲೀಕ ದೇವರಾಜು, ಆತನ ಪುತ್ರ, ಮತ್ತು ಮೇಸ್ತ್ರಿಯನ್ನು ಪೊಲೀಸರು ವಶಕ್ಕೆ ಪಡೆದರು.



> ಹಾಸನ ತಾಲ್ಲೂಕಿನ ದುಮಗೆರೆಯಲ್ಲಿ ಶ್ರೀಮಂತ ಗಣಿ ಉದ್ಯಮಿಯೊಬ್ಬ ತನ್ನ ಹಣಬಲ, ಪ್ರಭಾವ ಬಳಸಿ ಗಣಿ ಅವಘಡವೊಂದರಲ್ಲಿ ಮೃತಪಟ್ಟ ಬಡ ಕಾರ್ಮಿಕನ ಶವವನ್ನೇ ನಾಪತ್ತೆ ಮಾಡಿ ವ್ಯವಸ್ಥೆಯನ್ನೇ ಅಣಕಿಸಿದ ಪ್ರಕರಣವನ್ನು ಮಾಧ್ಯಮಗಳು ನಿರ್ಭೀತವಾಗಿ ವರದಿ ಮಾಡಿ ಬಯಲಿಗೆಳೆದಿವೆ. ಹಾಸನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಪೊಲೀಸ್ ವರಿಷ್ಠಾಧಿಕಾರಿ ನಡುರಾತ್ರಿ ಕ್ವಾರಿಗೆ ತೆರಳಿ ಪರಿಶೀಲನೆ ನಡೆಸಿದರು. ಆರೋಪಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸುವ ಮೂಲಕ ಕ್ವಾರಿ ಮಾಲೀಕನ ನಿರ್ಲಕ್ಷ್ಯದಿಂದ ಪ್ರಾಣ ಕಳೆದುಕೊಂಡ ಅಮಾಯಕ ಕಾರ್ಮಿಕನ ಸಾವಿಗೆ ನ್ಯಾಯ ಒದಗಿಸಿದ್ದಾರೆ.

### ಐಜಿ ಬೋರಲಿಂಗಯ್ಯ ಭೇಟಿ

ಐಜಿ ಬೋರಲಿಂಗಯ್ಯ ತಡರಾತ್ರಿ 3 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಂದು ಬೆಳಿಗ್ಗೆ ಆಸ್ಪತ್ರೆಗೆ ತೆರಳಿ ಗಾಯಾಳುಗಳ ಆರೋಗ್ಯದ ಮಾಹಿತಿ ಪಡೆದುಕೊಂಡರು. ಎಫ್‌ಎಸ್‌ಎಲ್ ತಂಡ, ಡಾಗ್‌ಸ್ಕ್ವಾಡ್, ಮತ್ತು ಐಎಸ್‌ಡಿ ಡಿವೈಎಸ್‌ಪಿ ಕ್ವಾರಿಗೆ ಭೇಟಿ ನೀಡಿ ಸಾಕ್ಷ್ಯ ಸಂಗ್ರಹಿಸಿದರು.

ಮೃತ ಮಣಿಯ ಶವವನ್ನು ತಮಿಳುನಾಡಿಗೆ ಸಾಗಿಸುವಾಗ, ಶಾಂತಿಗ್ರಾಮ ಪೊಲೀಸರು ಚಾಮರಾಜನಗರ ಪೊಲೀಸರ ಸಹಕಾರದಿಂದ ಶವವನ್ನು ವಶಕ್ಕೆ ಪಡೆದು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದರು. ಕ್ವಾರಿ ಮಾಲೀಕ ದೇವರಾಜು.ಟಿ.ಎನ್., ಅವರ ಪುತ್ರ ಅರ್ಜುನ.ಟಿ.ಡಿ., ಶ್ರೀಧರ್‌ಬಾಬು, ಕೃಷ್ಣಮೂರ್ತಿ, ಪ್ರಕಾಶ್ ಮತ್ತು ಇತರರ ವಿರುದ್ಧ ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



### ನಿರ್ಲಕ್ಷ್ಯವೋ? ಜಾಣ ಕುರುಡೋ?

ಸಾಮಾನ್ಯವಾಗಿ ಸಣ್ಣಪುಟ್ಟ ಗಲಾಟೆಗಳಾದರೂ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗಳಿಗೆ ಮಾಹಿತಿ ಇರುತ್ತದೆ. ಅಷ್ಟರಮಟ್ಟಿಗೆ ಪೊಲೀಸ್ ಮಾಹಿತಿ ಜಾಲ ಬಲವಾಗಿರುತ್ತದೆ.

ಆದರೆ, ಇಂತಹ ದೊಡ್ಡ ಘಟನೆ ನಡೆದರೂ ಅದು ಮಧ್ಯರಾತ್ರಿ ತನಕವೂ ಶಾಂತಿಗ್ರಾಮ ಠಾಣೆ ಪೊಲೀಸರ ಗಮನಕ್ಕೆ ಬಾರದಿರುವುದು ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಮೆಡಿಕೋಲಿಗಲ್ ನೋಟಿಸ್ (ಎಂಎಲ್ ಸಿ) ಇಲ್ಲದೆ ಗಾಯಾಳುಗಳನ್ನು ದಾಖಲಿಸಿರುವುದು ಅನುಮಾನಕ್ಕೆ ಕಾರಣವಾಗಿದೆ. ಇದು ಪೊಲೀಸರ ನಿರ್ಲಕ್ಷ್ಯವೋ? ಅಥವಾ ಜಾಣ ಕುರುಡು ಪ್ರದರ್ಶನವೋ ಎನ್ನುವ ಪ್ರಶ್ನೆ ಮೂಡುತ್ತದೆ.



ಮೃತ ಕಾರ್ಮಿಕ ಮಣಿ, ಪತ್ನಿ, ಮಗಳೊಂದಿಗೆ

---

# ಬಾಳ್ಳುಪೇಟೆ ಗ್ರಾ.ಪಂ. ಅಧ್ಯಕ್ಷರಾಗಿ ಪ್ರೇಮಲತಾ ಆಯ್ಕೆ



ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಪ್ರೇಮಲತಾ ರವೀಂದ್ರ ಅವರು ಶುಕ್ರವಾರ ಅವಿರೋಧ ಆಯ್ಕೆಯಾದರು.

ಚಿಕ್ಕನಾಯಕನಹಳ್ಳಿ ಕ್ಷೇತ್ರದ ಶಾಂತ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಿತು.

ಬಿಜೆಪಿ ಹಾಗು ಜೆಡಿಎಸ್ ಬೆಂಬಲಿತ ಬಾಳ್ಳುಪೇಟೆ ಕ್ಷೇತ್ರದ ಸದಸ್ಯೆ ಪ್ರೇಮಲತಾ ರವೀಂದ್ರ ಹೊರತುಪಡಿಸಿ ಬೇರೆ ಯಾವ ಸದಸ್ಯರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಘೋಷಣೆ ಮಾಡಲಾಯಿತು.

16 ಸದಸ್ಯ ಬಲದ ಗ್ರಾಮ ಪಂಚಾಯಿತಿಯಲ್ಲಿ ಬಿಜೆಪಿ-ಜೆಡಿಎಸ್ ಬೆಂಬಲಿತ 14 ಸದಸ್ಯರಿದ್ದಾರೆ. ಕಾಂಗ್ರೆಸ್ ಬೆಂಬಲಿತ ಓರ್ವ ಸದಸ್ಯೆ ಹಾಗು ಅನಾರೋಗ್ಯದಿಂದ ಮತ್ತೊಬ್ಬ ಸದಸ್ಯರು ಗೈರಾಗಿದ್ದರು.

ಚುನಾವಣಾಧಿಕಾರಿಯಾಗಿ ತಹಸೀಲ್ದಾರ್ ಅರವಿಂದ್, ಸಹ ಚುನಾವಣಾಧಿಕಾರಿಯಾಗಿ ತಾಲ್ಲೂಕು ಚುನಾವಣಾ ಶಿರಸ್ತೇದಾರ್ ಶ್ವೇತಾ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹರೀಶ್ ಕರ್ತವ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ ಪ್ರೇಮಲತಾ ಅವರು ಮಾತನಾಡಿ, ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾ.ಪಂ. ಉಪಾಧ್ಯಕ್ಷ ಹೆಚ್.ಎಂ. ಸ್ವಾಮಿ, ಸದಸ್ಯರಾದ ರೋಹಿತ್, ರಾಜೇಶ್, ಪ್ರಕಾಶ್, ಕೃಷ್ಣಮೂರ್ತಿ, ಸಂಜು, ಭರತ್ ರೈ, ಶಿಲ್ಪಾ ಮಲ್ಲಿಕ್, ಶಾಂತ, ಶೋಭಾ, ರತ್ನ, ಲತಾ, ಕವಿತಾ, ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಶಿವಕುಮಾರ್ ಮೆಣಸಮಕ್ಕಿ, ಮುಖಂಡರಾದ ಸುರೇಶ್, ಚಂದ್ರು, ಬಸವರಾಜ್ ಹಾಗು ಇತರರಿದ್ದರು.

# ಚಿನ್ನಾಭರಣ ದೋಚಿದ ಪ್ರಕರಣ: ಅಪರಾಧಿಗೆ ಶಿಕ್ಷೆ

ಅರಸೀಕೆರೆ: ಮನೆಗೆ ಬಂದ ಅತಿಥಿಯೇ ಮಹಿಳೆ ಕೊರಳಿಂದ ಚಿನ್ನಾಭರಣ ದೋಚಿದ್ದ ಪ್ರಕರಣದ ಅಪರಾಧಿಗೆ 2 ವರ್ಷ ಕಾರಾಗೃಹ ಶಿಕ್ಷೆ ಹಾಗು 20 ಸಾವಿರ ರೂ. ದಂಡ ವಿಧಿಸಿ ತಾಲ್ಲೂಕು ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ನಗರದ ಎನ್. ಪವನ್ ಶಿಕ್ಷೆಗೆ ಗುರಿಯಾದವನು. 2022ರ ಡಿ. 1 ರಂದು ಮಿನಿವಿಧಾನಸೌಧ ಸಮೀಪದ ಶಕುಂತಲ ಅವರ ಮನೆಗೆ ತೆರಳಿದ್ದ ಪವನ್ ಕೆಲಹೊತ್ತು ಮಾತುಕತೆ ನಡೆಸಿ ನಂತರ ಟೀ ಕುಡಿದು ಅಲ್ಲಿಂದ ಹೊರಡುವಾಗ ಮಹಿಳೆಯ ಕೊರಳಲ್ಲಿದ್ದ 22 ಗ್ರಾಂ ತೂಕದ ಶಿವಲಿಂಗದ ಪೆಂಡೆಂಟ್ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ನಗರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಕಿರಣ್ ಕುಮಾರ್ ಡಿ. ವಡಿಗೇರಿ ಅವರು ಆರೋಪ ಸಾಬೀತಾದ ಹಿನ್ನಲೆಯಲ್ಲಿ 2 ವರ್ಷ ಕಾರಾಗೃಹ ಶಿಕ್ಷೆ ಮತ್ತು 20 ಸಾವಿರ ರೂ. ದಂಢ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ವಿರೂಪಾಕ್ಷ ವಾದ ಮಂಡಿಸಿದ್ದರು.

# ತ್ಯಾಜ್ಯ ನಿರ್ವಹಣೆ: ಚ.ರಾ.ಪ. ಪುರಸಭೆ ಮಾದರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಪಟ್ಟಣದ ವಾರ್ಡ್‌ಗಳ ಕಸ ತೆರವುಗೊಳಿಸಿ ತ್ಯಾಜ್ಯ ನಿರ್ವಹಣೆ ಮಾಡುವ ಮೂಲಕ ನಗರವನ್ನು ಸ್ವಚ್ಛ ಹಾಗೂ ಸುಂದರಗೊಳಿಸುವಲ್ಲಿ ಚನ್ನರಾಯಪಟ್ಟಣ ಪುರಸಭೆಯು ಜಿಲ್ಲೆಗೆ ಮಾದರಿಯಾಗಿದೆ.

ಕಳೆದ ವರ್ಷ ಕೇಂದ್ರ ಸರ್ಕಾರ ಹವಮಾನ ಇಲಾಖೆ ಮೂಲಕ ನಡೆಸಿದ್ದ ಸರ್ವೆಯಲ್ಲಿ ದೇಶದಲ್ಲಿಯೇ ಚನ್ನರಾಯಪಟ್ಟಣ ನಗರವು ಉತ್ತಮ ಪರಿಸರ ಹಾಗೂ ಗುಣಮಟ್ಟದ ಗಾಳಿಯಲ್ಲಿ ಮೊದಲ ಸ್ಥಾನ ಪಡೆದಿದ್ದು ಇದಕ್ಕೆ ಪೂರಕ ಸಾಕ್ಷಿಯಾಗಿದೆ.

ಪುರಸಭೆಯು 23 ವಾರ್ಡ್‌ಗಳನ್ನು ಒಳಗೊಂಡಿದ್ದು 170 ಮಂದಿ ಪೌರ ಕಾರ್ಮಿಕರು ಹಾಗೂ 60 ಮಂದಿ ಹೊರಗುತ್ತಿಗೆ ಪೌರ ಕಾರ್ಮಿಕರನ್ನು ಹೊಂದಿದೆ.



ಪ್ರತಿನಿತ್ಯ ಬೆಳಗ್ಗೆ ಎಲ್ಲ ವಾರ್ಡ್‌ಗಳಲ್ಲಿಯೂ ಪೌರ ಕಾರ್ಮಿಕರು ಕರ್ತವ್ಯ ನಿರ್ವಹಿಸಲಿದ್ದು ಕಸ ನಿರ್ವಹಣೆ ಮಾಡಲಿದ್ದಾರೆ.

ಕಸ ಸಂಗ್ರಹಿಸಲು 10 ಆಟೋ ಟಿಪ್ಪರ್‌ಗಳಿದ್ದು ನಿತ್ಯ ಹಸಿ-ಒಣ ಸೇರಿದಂತೆ ಸುಮಾರು 16 ರಿಂದ 18 ಟನ್ ಕಸ ಉತ್ಪಾದನೆ ಆಗುತ್ತಿದೆ. ಇದನ್ನು 24 ಎಕರೆ ಪ್ರದೇಶ ಹೊಂದಿರುವ ಪಟ್ಟಣ ಸಮೀಪದ ನಲ್ಲೂರು ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಣೆ ಮಾಡಲಾಗುತ್ತಿದೆ.

ಇದರಲ್ಲಿ ಶೇ.90 ರಷ್ಟು ಕಸವನ್ನು ಮರು ಬಳಕೆಗೆ ಪರಿವರ್ತನೆ ಮಾಡಲಾಗುತ್ತಿದೆ. ಶೇ.10 ರಷ್ಟು ನಿಸ್ಸತ್ವ ತ್ಯಾಜ್ಯವನ್ನು ಸ್ಯಾನಿಟರಿ ಲ್ಯಾಂಡ್‌ಫಿಲ್‌ನಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಆರ್.ಯತೀಶ್ ತಿಳಿಸಿದರು.

ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿಗಾಗಿ ಆಟೋ ಟಿಪ್ಪರ್ ಫ್ರಂಟ್ ಮತ್ತು ಬ್ಯಾಕ್‌ಹೋ ಲೋಡರ್ ಜೆಸಿಬಿ, ಕಾಂಪ್ಯಾಕ್ಟರ್ ಟ್ರ್ಯಾಕ್ಟರ್‌ಗಳು, ಮಿನಿ ಇಟಾಚಿ ಜತೆಗೆ ಅರೆಯುವ ಯಂತ್ರಗಳನ್ನು ಈಗಾಗಲೇ ಅಳವಡಿಸಲಾಗಿದೆ.



> ಘಟಕದಲ್ಲಿ ಶೇ.90 ರಷ್ಟು ಗುಣಾತ್ಮಕ ಹಾಗೂ ಕ್ರಮಬದ್ಧ ಕೆಲಸ ನಡೆಯುತ್ತಿದೆ. ಈವರೆಗೆ 350 ಟನ್ ಸಂಸ್ಕರಿಸಿದ ಗೊಬ್ಬರ 1 ಕೆಜಿ 2 ರೂ. ನಂತೆ ಮಾರಾಟ ಮಾಡಲಾಗಿದೆ. ಇನ್ನೂ 250 ಟನ್ ಸಂಗ್ರಹ ಇದೆ. ಎಲ್ಲೆಂದರಲ್ಲಿ ಕಸ ಹಾಕುವುದನ್ನು ಕಂಡು ಹಿಡಿಯಲು ಸಿಸಿ ಕ್ಯಾಮೆರಾ ಅಳವಡಿಸಲು ಸೂಚಿಸಲಾಗಿದೆ.
>
> 
>
> ಸಿ.ಎನ್.ಬಾಲಕೃಷ್ಣ, ಶಾಸಕ

ಅಚ್ಚುಕಟ್ಟು ಕಸ ವಿಲೇವಾರಿ ಕಾರ್ಯಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಪೌರಕಾರ್ಮಿಕರು ಉತ್ತಮ ರೀತಿಯ ಸಹಕಾರ ನೀಡುತ್ತಿದ್ದಾರೆ. ಗಬ್ಬು ನಾರುವ ಕಸವನ್ನು ಮರು ಬಳಕೆ ಮಾಡುವ ರೀತಿಯಲ್ಲಿ ಪರಿವರ್ತಿಸಲು ಬೇಕಾದ ಬೈಲಿಂಗ್ ಯಂತ್ರ, ಶೇಡ್ಡರ್ ಯಂತ್ರ ಟ್ರೊಮೆಲ್ ಮತ್ತು ಪ್ಲಾಸ್ಟಿಕ್ ಪೆಲ್ಲೆಟೈಸಿಂಗ್ ಯಂತ್ರಗಳಿಗೆ ಸುಮಾರು ಒಂದು ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ.

### ಗೊಬ್ಬರ ಲಭ್ಯ

ಪ್ರಸಕ್ತ ಸಾಲಿನಲ್ಲಿ ತ್ಯಾಜ್ಯದಿಂದ ಸಿದ್ದಗೊಳಿಸಿರುವ 350 ಟನ್ ಗೊಬ್ಬರವನ್ನು ಕೇಜಿ ಗೆ 2 ರೂ. ನಂತೆ ರೈತರಿಗೆ ಮಾರಾಟ ಮಾಡಲಾಗಿದ್ದು ಶೆಡ್‌ನಲ್ಲಿ ಇನ್ನೂ 250 ಟನ್ ಗೊಬ್ಬರವಿದೆ. ರೈತರು ಭೇಟಿ ನೀಡಿ ಪಡೆದು ಬೆಳೆಗಳಿಗೆ ಅಳವಡಿಸಬಹುದು.

### ಗುದ್ದಲಿ ಪೂಜೆ

ಅಪ್ರೋಚ್ ರಸ್ತೆ, ಕಾಂಪೌಂಡ್ ಗೋಡೆ, ವಿಂಡ್ರೋ ಪ್ಲಾಟ್ ಫಾರ್ಮ್, ಶೆಡ್‌ಗಳು, ಸ್ಯಾನಿಟರಿ ಲ್ಯಾಂಫಿಲ್, ಲೀಚೇಟ್‌ಕೊಳ ಮತ್ತು ವಿದ್ಯುದ್ದೀಕರಣ ಹಾಗೂ ರಸ್ತೆಗೆ 2 ಕೋಟಿ ಖರ್ಚು ಮಾಡಲಾಗಿದೆ. ಇದೀಗ ಎಂಆರ್‌ಎಫ್ ಶೆಡ್, ಯಂತ್ರೋಪಕರಣ, ವಾಚ್‌ಮೆನ್ ಶೆಡ್, ಪೈಪ್‌ಲೈನ್ ಸೇರಿದಂತೆ 1 ಕೋಟಿ ವೆಚ್ಚದ ಕಾಮಗಾರಿಗೆ ವಿಶ್ವ ಪರಿಸರ ದಿನದಂದು ಶಾಸಕ ಸಿ.ಎನ್.ಬಾಲಕೃಷ್ಣ ಗುದ್ದಲಿ ಪೂಜೆ ನೆರವೇರಿಸಿದರು.

### ಒಪ್ಪಂದಕ್ಕೆ ಸಹಿ

ಹೆಚ್ಚುವರಿಯಾಗಿ ಇ-ತ್ಯಾಜ್ಯ ಮತ್ತು ಬಾರ್‌ಗಳಿಂದ ಹೊರ ಬೀಳುವ ವಿವಿಧ ಮದ್ಯಗಳ ಟೆಟ್ರಾ ಪ್ಯಾಕ್ ಸಂಗ್ರಹಣೆ ಮತ್ತು ಮಾರಾಟಕ್ಕಾಗಿ ಪುರಸಭೆ ಮತ್ತು ಕ್ಲಿಯರಿನ್ ಹಾಸನ ನಡುವೆ ಒಪ್ಪಂದಕ್ಕೆ ಸಹಿ ಮಾಡಲಾಗಿದೆ. ಟೆಟ್ರಾ ಪ್ಯಾಕ್‌ಗಳನ್ನು ಬೆಲ್ಲದಚ್ಚು ರೀತಿ ಪಿಂಡಿ ಮಾಡಿ ಮಾರಾಟ ಮಾಡಲಾಗುತ್ತಿರುವುದು ಗಮನಾರ್ಹವಾಗಿದೆ. ಪ್ಲಾಸ್ಟಿಕ್ ಮಾಲಿನ್ಯ ಹಾಗೂ ಬಳಕೆ ಕಡಿಮೆ ಮಾಡಲು ಪುರಸಭೆ ಎಲ್ಲ ಕ್ರಮ ಕೈಗೊಂಡಿದೆ.

ಪ್ರಸ್ತುತ ಹಸಿ ತ್ಯಾಜ್ಯವನ್ನು ವಿಂಡ್ರೋ ಮತ್ತು ವರ್ಮಿ ಕಂಪೋಸ್ಟಿಂಗ್ ವಿಧಾನಗಳ ಮೂಲಕ ಸಿದ್ಧಪಡಿಸಿಕೊಂಡಿರುವ ಹಾಗೂ ಒಣ ತ್ಯಾಜ್ಯದ ದೈನಂದಿನ ಸಂಗ್ರಹ ತ್ಯಾಜ್ಯವನ್ನು ಬೇರ್ಪಡಿಸಲು ನೇರವಾಗಿ ಟ್ರಾಮೆಲ್ ಯಂತ್ರಕ್ಕೆ ತಲುಪಿಸಲಾಗುತ್ತದೆ. ನಂತರ ನಿಸತ್ವ ತ್ಯಾಜ್ಯವನ್ನು ಈಗಾಗಲೇ ಸ್ಥಾಪಿಸಿರುವ ಪ್ರತ್ಯೇಕ ಸ್ಯಾನಿಟರಿ ಲ್ಯಾಂಫಿಲ್‌ಗೆ ಹಾಕಲಾಗುತ್ತದೆ.

ಮುಂಬರುವ ದಿನಗಳಲ್ಲಿ, ತ್ಯಾಜ್ಯ ವಿಭಜನೆ ಮತ್ತು ಮರುಬಳಕೆ ದಕ್ಷತೆ ಹೆಚ್ಚಿಸಲು ಅಗತ್ಯ ಯಂತ್ರೋಪಕರಣ ಜೊತೆಗೆ ಒಣ ತ್ಯಾಜ್ಯ ಸಂಸ್ಕರಣೆ ಮತ್ತು ವಸ್ತು ಮರು ಪಡೆಯುವಿಕೆ ಸೌಲಭ್ಯ ಶೆಡ್ ಸ್ಥಾಪನೆ ಮತ್ತು ಕಾರ್ಯಾಚರಣೆಗಾಗಿ ಕಾರ್ಯಾದೇಶ ನೀಡಲಾಗಿದೆ. ಒಣ ತ್ಯಾಜ್ಯ ನಿರ್ವಹಣೆ ಸುಗಮಗೊಳಿಸುವ ಮತ್ತು ಕಡಿಮೆ ಮಾಡುವ ಗುರಿ ಹೊಂದಲಾಗಿದೆ ಎಂದು ಪುರಸಭೆ ಅಧಿಕಾರಿಗಳು ತಿಳಿಸಿದರು.

### ಕಸ ಎಸೆವ ಸ್ಥಳವೇ ಪಾರ್ಕ್

ಪಟ್ಟಣದ ನಿವಾಸಿಗಳು ಕಸ ಎಸೆಯುವ ಜಾಗವನ್ನು ಪಾರ್ಕ್ ಆಗಿ ಪರಿವರ್ತಿಸುವ ವಿಭಿನ್ನ ಆಲೋಚನೆ ಫಲಿಸಿದೆ. ಎಲ್ಲೆಂದರಲ್ಲಿ ಕಸ ಎಸೆಯುವುದೂ



> ಪುರಸಭೆ ಉತ್ತಮ ರೀತಿಯಲ್ಲಿ ಕಸ ವಿಂಗಡಣೆ ಹಾಗೂ ವಿಲೇವಾರಿಯಲ್ಲಿ ಜಿಲ್ಲೆಯಲ್ಲಿಯೇ ಮೊದಲ ಸ್ಥಾನದಲ್ಲಿದ್ದು, ಇದಕ್ಕಾಗಿ ರಾಷ್ಟ್ರಪ್ರಶಸ್ತಿ ಗಳಿಸಿದ್ದೇವೆ. ಶಾಸಕರ ಮಾರ್ಗದರ್ಶನ, ಸರ್ವ ಸದಸ್ಯರ ಸಹಕಾರ, ಅಧಿಕಾರಿ ವರ್ಗದ ನೆರವು ಹಾಗೂ ಪೌರಕಾರ್ಮಿಕರ ಶ್ರಮದ ಜತೆಗೆ ನಗರ ನಿವಾಸಿಗಳ ಸಹಕಾರ ಮುಖ್ಯವಾಗಿದೆ.
>
> 
>
> - ಮೋಹನ್, ಪುರಸಭೆ ಅಧ್ಯಕ್ಷ.

ಸಹ ಕಡಿಮೆಯಾಗಿದೆ. ಇದೇ ಕಾರಣಕ್ಕೆ ಸ್ವಚ್ಛತೆ ಕಾಪಾಡಿಕೊಂಡಿರುವ ರಾಜ್ಯದ ವಿವಿಧ ಪುರಸಭೆಗಳ ಪೈಕಿ ಈ ಪುರಸಭೆಯೂ ಒಂದಾಗಿದೆ. ಸ್ವಚ್ಛ ಸರ್ವೇಕ್ಷಣ್ ಶ್ರೇಯಾಂಕದಡಿ ರಾಷ್ಟ್ರಮಟ್ಟದಲ್ಲಿ ಪ್ರಶಂಸೆ ಪಡೆದಿದೆ. ವಾಯು ಗುಣಮಟ್ಟದಲ್ಲೂ ದೇಶದಲ್ಲಿಯೇ 1 ನೇ ಶ್ರೇಣಿ ಪಡೆದುಕೊಂಡಿದೆ. ಜನರು ಸಹಕಾರ ನೀಡಿದರೆ ಇನ್ನೂ ಉತ್ತಮ ಕೆಲಸ ಮಾಡಬಹುದು ಎಂದು ಪುರಸಭೆ ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್ ತಿಳಿಸಿದರು.

